**<u>ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *31.07.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

2 ನೇ ಆರೋಪಿ ಪ್ರಭುಸ್ವಾಮಿ ನನ್ನ ಗಂಡನ ಅಣ್ಣ ಎಂದರೆ ಸರಿ. 1 ನೇ ಆರೋಪಿ 2 ನೇ ಆರೋಪಿತನ ಮಗ ಎಂದರೆ ಸರಿ. ನಮ್ಮ ಮನೆ ಮತ್ತು 2 ನೇ ಆರೋಪಿತರ ಮನೆ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ನನ್ನ ಇಬ್ಬರು ಹೆಣ್ಣು ಮಕ್ಕಳಿಗೆ ಮದುವೆ ಆಗಿ ಇಲ್ಲಿಗೆ 15 ವರ್ಷವಾಗಿರುತ್ತದೆ ಎಂದರೆ ಸರಿ. ನನ್ನ ಮಗಳು ಗೀತಾಳನ್ನು ಬಸವಟ್ಟಿಗೆ ಗ್ರಾಮಕ್ಕೆ ಕೊಟ್ಟು ಲಗ್ನ ಮಾಡಿರುತ್ತೇವೆ ಎಂದರೆ ಸರಿ. ನಮ್ಮ ಊರಿನಿಂದ ಬಸವಟ್ಟಿಗೆ ಗ್ರಾಮಕ್ಕೆ ಸುಮಾರು 20 ಕಿ.ಮೀಟರ್ ಅಂತರ ಎಂದರೆ ಸರಿ. ಗೀತಾಳಿಗೆ ಒಬ್ಬ ಮಗಳು ಇದ್ದು ಆಕೆ ನನ್ನ ಮತ್ತು ನನ್ನ ಗಂಡನ ಜೊತೆಯಲ್ಲಿ ವಾಸವಿದ್ದು ವಿದ್ಯಾಭ್ಯಾಸವನ್ನು ಮರಳೈಪುರದಲ್ಲಿ ಮಾಡಿದ್ದಳು ಎಂದರೆ ಸರಿ. ನನ್ನ 2 ನೇ ಮಗಳ ಹೆಸರು ನೇತ್ರಾವತಿ ಆಕೆಯನ್ನು ಚಿಕ್ಕಕವಲಂದೆ ಗ್ರಾಮದ ಮಹೇಶ ಎಂಬುವರಿಗೆ ಕೊಟ್ಟು ಲಗ್ನ ಮಾಡಿರುತ್ತದೆ ಎಂದರೆ ಸರಿ. ಚಿಕ್ಕ ಕವಲಂದೆ ಗ್ರಾಮದಿಂದ ನಮ್ಮ ಊರಿಗೆ 15 ಕಿ.ಮೀಟರ್ ಅಂತರ ಇರುತ್ತೆ ಎಂದರೆ ಸರಿ. ನನ್ನ ಇಬ್ಬರು ಹೆಣ್ಣು ಮಕ್ಕಳು ಅವರ ಗಂಡಂದಿರ ಮನೆಗಳಲ್ಲಿ ವಾಸವಾಗಿದ್ದು ಹಬ್ಬ ಹರಿದಿನಗಳಲ್ಲಿ ಬರುತ್ತಾರೆ ಎಂದರೆ ಸರಿ.

ನನ್ನ ಮಾವ ಸಿದ್ದವೀರಪ್ಪ ನಿಗೆ ಏಳು ಜನ ಗಂಡು ಮಕ್ಕಳು. ನನ್ನ ಗಂಡ ಎಲ್ಲರಿಗಿಂತ ಕಿರಿಯವರು ಇದ್ದರು. ಸಿದ್ದವೀರಪ್ಪನ ಗಂಡು ಮಕ್ಕಳು ಭಾಗ ಆಗಿರುತ್ತಾರೆ ಎಂದರೆ ಸರಿ. ಭಾಗ ಆಗಿ ಇಲ್ಲಿಗೆ 60 ವರ್ಷ

ಆಗಿರುತ್ತದೆ ಎಂದರೆ ಸರಿಯಲ್ಲ, 40 ವರ್ಷ ಆಗಿರುತ್ತದೆ. ಜಮೀನುಗಳು ಭಾಗ ಆದಾಗಿನಿಂದ ಅವರ ಅವರ ಭಾಗಕ್ಕೆ ಬಂದಂತಹ ಆಸ್ತಿಗಳನ್ನು ಅವರವರೇ ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ಸರಿ. ಜಮೀನಿನ ಭಾಗಂಶದ ಬಗ್ಗೆ ಮತ್ತು ಅನುಭವದ ಬಗ್ಗೆ ಅಣ್ಣತಮ್ಮಂದಿರಲ್ಲಿ ಯಾವುದೇ ವೈಷಮ್ಯ ಇರುವುದಿಲ್ಲ ಎಂದರೆ ಸರಿ. ನನ್ನ ಗಂಡ ಮತ್ತು 2 ನೇ ಆರೋಪಿ ಜಮೀನುಗಳನ್ನು ಭಾಗ ಮಾಡಿಕೊಂಡ ಮೇಲೆ ಅವರಿಬ್ಬರು ಅದಲುಬದಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆ ರೀತಿ ಜಮೀನುಗಳನ್ನು ಅದಲು ಬದಲು ಮಾಡಿಕೊಂಡ ಮೇಲೆ ನನ್ನ ಗಂಡ ಮತ್ತು 2 ನೇ ಆರೋಪಿ ಅನ್ಯೋನ್ಯವಾಗಿ ಇದ್ದರು ಎಂದರೆ ಸರಿ.

ಜಗಳ ಆಗಿತ್ತು ಎಂದು ನಾನು ಏನು ಹೇಳುತ್ತೇನೆಯೋ ಆ ಜಮೀನಿಗೆ ಗುಡಿ ಹೊಲ ಅಂತ ಹೇಳುತ್ತಾರೆ ಎಂದರೆ ಸರಿ. ಆ ಗುಡಿ ಹೊಲ ಎಷ್ಟು ವಿಸ್ತೀರ್ಣದಲ್ಲಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ 3 ಜನರಿಗೆ ಭಾಗ ಆಗಿರುತ್ತದೆ ಅವರುಗಳೆಂದರೆ 2 ನೇ ಆರೋಪಿ, ನನ್ನ ಗಂಡ ಮತ್ತು ಬಸವಣ್ಣ ಸಮವಾಗಿ ಭಾಗ ಮಾಡಿಕೊಂಡಿರುತ್ತಾರೆ. ಬಸವಣ್ಣನ ಭಾಗವನ್ನು 2 ನೇ ಆರೋಪಿ ಖರೀದಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಹಾಗಾಗಿ 2 ನೇ ಆರೋಪಿತರಿಗೆ ಗುಡಿ ಹೊಲದಲ್ಲಿ 4 ಎಕರೆ 14 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ನಮಗೆ 2 ಎಕರೆ 13 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಗುಡಿ ಜಮೀನಿನ ಪಕ್ಕದಲ್ಲಿ ಮಹದೇಶ್ವರ ಸ್ವಾಮಿಯ ದೇವಸ್ಥಾನ ಇರುತ್ತದೆ. ಆ ದೇವಸ್ಥಾನ ನಮ್ಮ ಜಮೀನಿಂದ ಸುಮಾರು 300 ಅಡಿ ಅಂತರದಲ್ಲಿ ಇರುತ್ತದೆ. ಮೊದಲಿನಿಂದಲೂ ಮತ್ತು ಬಸವಣ್ಣನ ಜಮೀನನ್ನು ಖರೀದಿ ಮಾಡಿದಾಗಿನಿಂದಲೂ 4 ಎಕರೆ 14 ಗುಂಟೆ ಜಮೀನನ್ನು ಅನುಭವಿಸಿಕೊಂಡು ಬರುತ್ತಿದ್ದು ನಮ್ಮ ಜಮೀನಿಗೆ ಬಂದಿರುವುದಿಲ್ಲ ಎಂದರೆ ಸರಿ. 2 ನೇ ಆರೋಪಿ ತಮ್ಮ ಭಾಗಕ್ಕೆ ಬಂದ

ಜಮೀನಿನಲ್ಲಿ ಒಳ್ಳೆಯ ಬೆಳೆಗಳಾದ ಕಬ್ಬು , ಬಾಳೆ , ತೆಂಗು ಮತ್ತು ಇನ್ನಿತರೆ ಬೆಳೆಗಳನ್ನು ಬೆಳೆಯುತ್ತಾರೆ ಎಂದರೆ ಸರಿ. ಆ ಜಮೀನಿನಲ್ಲಿ ಪಂಪ್ ಸೆಟ್ ಇರುತ್ತದೆ ಎಂದರೆ ಸರಿ. ನಾನು ಪುನಃ ಹೇಳುವುದೇನೆಂದರೆ ಕಬ್ಬು ಬೆಳೆಯುತ್ತಿರಲಿಲ್ಲ ಬಾಳೆ, ತೆಂಗು ಬೆಳೆಯುತ್ತಿರುತ್ತಾರೆ.

2 ನೇ ಆರೋಪಿತನ ಜಮೀನಿನ ಆಜುಬಾಜು ಸುಮಾರು ಪಂಪ್ ಸೆಟ್ ಇರುತ್ತವೆ ಎಂದರೆ ಸರಿ. ನಮ್ಮ ಜಮೀನಿನ ಸುತ್ತಾ ಮುತ್ತಾ ಯಾರ ಜಮೀನುಗಳು ಇರುತ್ತವೆ ಎಂದು ಹೇಳಲು ನನಗೆ ಆಗುವುದಿಲ್ಲ. ನಮ್ಮ ಜಮೀನಿನ ಅಕ್ಕಪಕ್ಕ ನಮ್ಮ ಊರಿನ ಜಮೀನುಗಳು ಇರುವುದಿಲ್ಲ ಪಿ.ಮರಳ್ಳಿ ಯವರ ಜಮೀನುಗಳು ಇರುತ್ತವೆ. ಆ ಜಮೀನುಗಳ ಮಾಲೀಕರ ಮತ್ತು ಕುಟುಂಬದವರ ಪರಿಚಯ ನಮಗೆ ಇರುವುದಿಲ್ಲ. ಮರಳ್ಳಿಪುರದಿಂದ ಗುಡಿ ಹೊಲದ ಜಮೀನಿಗೆ ಬಂದರೆ ಮೊದಲಿಗೆ ಸಿಗುವುದು ನಮ್ಮ ಜಮೀನು ಎಂದರೆ ಸರಿ. ನಮ್ಮ ಜಮೀನನ್ನು ದಾಟಿಕೊಂಡು 2 ನೇ ಆರೋಪಿತನ ಜಮೀನಿಗೆ ಹೋಗುಬೇಕು ಎಂದರೆ ಸರಿ. ಮರಳ್ಳಿಪುರದಿಂದ ಗುಡಿ ಹೊಲದ ಜಮೀನಿಗೆ ಬಂದರೆ ಮೊದಲಿಗೆ ಮಹದೇವಸ್ವಾಮಿ ದೇವಸ್ಥಾನ ಸಿಗುತ್ತದೆ ಆ ನಂತರ ನಮ್ಮ ಜಮೀನು ಬರುತ್ತದೆ. ನನ್ನ ಗಂಡ ಮತ್ತು ಅವರ ಅಣ್ಣಂದಿರು ಭಾಗ ಆಗುವ ಕಾಲಕ್ಕೆ ಗುಡಿ ಹೊಲದ ನಮ್ಮ ಜಮೀನಿನ ದಕ್ಷಿಣದ ಅಡ್ಡಾಳದ ಕಡೆಯಿಂದ 2 ನೇ ಆರೋಪಿತನ ಜಮೀನಿಗೆ ಹೋಗಲು ದಾರಿ ಕೊಡಬೇಕು ಎಂದು ಪಾಲುಪಟ್ಟಿಯಲ್ಲಿ ಬರವಣಿಗೆ ಆಗಿತ್ತು ಎಂದರೆ ಸರಿ. ಅದೇ ರೀತಿ ಆರೋಪಿತರು ನಮ್ಮ ಜಮೀನಿಗೆ ದಕ್ಷಿಣದ ಅಡ್ಡಾಳದ ಕಡೆಯಿಂದ ಅವರ ಜಮೀನಿಗೆ ಹೋಗುತ್ತಿದ್ದರು ಎಂದರೆ ಸರಿ. ಆರೋಪಿತರು ಅವರ ಜಮೀನಿಗೆ ಗಾಡಿ, ಟ್ರಾಕ್ಟರ್ ಗಳನ್ನು ನಮ್ಮ ಜಮೀನಿನ ತೆವರು ಕಡೆಯಿಂದ ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ. ಬೇರೆಯವರು ಸಹ

ಅದೇ ರಸ್ತೆಯಿಂದ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಜಮೀನಿನ ತೆವರು ಆದ ಮೇಲೆ ಅಡ್ಡ ಹಳ್ಳ ಇದ್ದು ಚನ್ನಾಕ್ಷಿ ಮರಗಳು ಇದ್ದವು ಎಂದರೆ ಸರಿ. ಅವುಗಳೆಲ್ಲವೂ ಕಾಡು ಜಾತಿಯ ಮರಗಳು ಎಂದರೆ ಸರಿ. ನಮ್ಮ ಜಮೀನಿನ ತೆವರಿನಲ್ಲಿ ಯಾವುದೇ ಮರಗಳು ಇರುವುದಿಲ್ಲ. ನನ್ನ ಗಂಡನ ಭಾಗಕ್ಕೆ ಬಂದಂತಹ ಜಮೀನನ್ನು ನನ್ನ ಗಂಡ ಉಳುಮೆ ಮಾಡುತ್ತಿರಲಿಲ್ಲ ಎಂದರೆ ಸರಿ ಮೊದಲು ಮಾಡುತ್ತಿರಲಿಲ್ಲ ಈಗ ಮಾಡುತ್ತಿದ್ದರು. ನಮ್ಮ ಜಮೀನನ್ನು ಮಾಳ ಬಿಟ್ಟಾಗ ಆರೋಪಿತರು ಧನ ಕರುಗಳನ್ನು ಅದೇ ಜಮೀನಿನಲ್ಲಿ ಮೇಯಿಸುತ್ತಿದ್ದರು ಎಂದರೆ ಸರಿ. ಆ ಬಗ್ಗೆ ನನ್ನ ಗಂಡ ಯಾವುದೇ ತಕರಾರನ್ನು ಮಾಡಿರಲಿಲ್ಲ ಎಂದರೆ ಸರಿ. ಈ ಜಮೀನನ್ನು ಹೊರತುಪಡಿಸಿದರೆ ನನ್ನ ಗಂಡನಿಗೆ ಗುಡಿ ಹೊಲದ ಜಮೀನಿನ ಕಡೆ ಯಾವುದೇ ಜಮೀನು ಇರುವುದಿಲ್ಲ.

ನನ್ನ ಗಂಡನಿಗೆ ಗುಡಿ ಹೊಲದ ಜಮೀನಿನಲ್ಲಿ ಭಾಗ ಬಂದಿದ್ದು ಅಲ್ಲದೇ ಬೇರೆ ಜಮೀನು ಇತ್ತು ಆ ಜಮೀನು ಎಲ್ಲಿ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಆ ಜಮೀನನ್ನು ಗಂಡ ಗುತ್ತಿಗೆಗೆ ಕೊಟ್ಟಿದ್ದರು ಎಂದರೆ ಸರಿ. ಈ ಎರಡು ಜಮೀನುಗಳು ಅಲ್ಲದೇ ನನ್ನ ಗಂಡನಿಗೆ ಬೇರೆ ಜಮೀನುಗಳು ಇರಲಿಲ್ಲ ಎಂದರೆ ಸರಿ. ನಮ್ಮ ಮನೆಯಲ್ಲಿ ಧನ ಕರ, ಆಡು ಮತ್ತು ಮೇಕೆ ಇರಲಿಲ್ಲ ಎಂದರೆ ಸರಿ. ಅದೇ ಕಾರಣಕ್ಕಾಗಿ ನಾವು ಜಮೀನಿನ ಕಡೆ ಹೆಚ್ಚಾಗಿ ಹೋಗುತ್ತಿರಲಿಲ್ಲ ಎಂದರೆ ಸರಿ. ನನ್ನ ಗಂಡ ನನ್ನನ್ನು ಕೂಲಿ ಕೆಲಸಕ್ಕೆ ಕಳುಹಿಸುತ್ತಿರಲಿಲ್ಲ ಎಂದರೆ ಸರಿ. ನನ್ನ ಗಂಡ ಬೇರೆಯವರ ಜಮೀನಿಗೆ ಹೋಗಿ ಕೂಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ಗಂಡ ರಾಜಕೀಯದಲ್ಲಿ ಓಡಾಡುತ್ತಿದ್ದರು ಎಂದರೆ ಸರಿಯಲ್ಲ, ಆದರೆ ರಾಜಕೀಯದವರೇ ನನ್ನ ಗಂಡನನ್ನು ಹುಡುಕಿಕೊಂಡು ಮನೆಗೆ ಬರುತ್ತಿದ್ದರು. ನನ್ನ ಗಂಡ ಊರಿನಲ್ಲಿ

ಮುಖಂಡರು ಇದ್ದರು. ಹಬ್ಬ ಹರಿದಿನಗಳಲ್ಲಿ ಮತ್ತು ದೇವರ ಮೆರವಣಿಗೆಯ ಸಂದರ್ಭದಲ್ಲಿ ನನ್ನ ಗಂಡ ಮುಂದೆ ನಿಂತು ನಡೆಸಿಕೊಡುತ್ತಿದ್ದರು ಎಂದರೆ ಸರಿ. ನಮ್ಮ ಊರಿನಲ್ಲಿ ಇದ್ದಂತಹ ದೇವಸ್ಥಾನದ ಮೆರವಣಿಗೆ ಸುಮಾರು ದಿವಸಗಳಿಂದ ನಿಂತು ಹೋಗಿತ್ತು ಎಂದರೆ ಸರಿಯಲ್ಲ.

ಮರಳ್ಳಿಪುರದಲ್ಲಿ ಇರುವ ಸ್ವಾಮಿ ಎಂಬುವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಗಂಡನಿಗೂ ಮತ್ತು ಸ್ವಾಮಿಗೂ ಊರಿನಲ್ಲಿ ಜಗಳ ಆಗಿ ಪೊಲೀಸ್ ಠಾಣೆಯಲ್ಲಿ ಕೇಸ್ ಆಗಿ ರಾಜೀ ಮಾಡಿಕೊಂಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪಿ. ಮರಹಳ್ಳಿ ಗ್ರಾಮದ ಶಿವಕುಮಾರ್ ಎಂಬುವರು ನನಗೆ ಗೊತ್ತಿರುವುದಿಲ್ಲ. ಶಿವಕುಮಾರ್ ನ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿ ಇರುತ್ತದೆ ಎಂದರೆ ಆ ಬಗ್ಗೆ ನಮಗೆ ಗೊತ್ತಿರುವುದಿಲ್ಲ. 2 ನೇ ಆರೋಪಿ ಊರಿನಲ್ಲಿ ಈಗ್ಗೆ 20 ವರ್ಷಗಳ ಹಿಂದೆ ಒಂದು ಹೊಸ ಮನೆ ಕಟ್ಟಿದ್ದು ಅದೇ ಮನೆಯಲ್ಲಿ 2 ನೇ ಆರೋಪಿ ಮತ್ತು ಮಕ್ಕಳು ವಾಸವಾಗಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ 2 ನೇ ಆರೋಪಿತನಿಗೆ ಒಬ್ಬನೇ ಮಗ ಎಂದರೆ ಸರಿ. 2 ನೇ ಆರೋಪಿತನ ಹೆಣ್ಣು ಮಕ್ಕಳಿಗೆ ಲಗ್ನ ಆಗಿ ಅವರ ಗಂಡಂದಿರ ಮನೆಯಲ್ಲಿ ವಾಸವಾಗಿದ್ದು ಅವರುಗಳು ಮರಹಳ್ಳಿಪುರದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿ. ನಮ್ಮ ಮನೆಯವರಿಗೂ ಮತ್ತು ಆರೋಪಿತರ ಮನೆಯವರಿಗೂ ಕಳೆದ 10 ವರ್ಷಗಳಿಂದ ಮಾತುಕತೆ ಇರಲಿಲ್ಲ ಎಂದರೆ ಸರಿ. ನಮ್ಮಷ್ಟಕ್ಕೆ ನಾವು ಇರುತ್ತಿದ್ದವು ಅವರಷ್ಟಕ್ಕೆ ಅವರು ಇರುತ್ತಿದ್ದರು ಎಂದರೆ ಸರಿ. ನನ್ನ ಗಂಡ ಲೇವಾದೇವಿ ವ್ಯವಹಾರ ಮಾಡುತ್ತಿದ್ದು ಬಡ್ಡಿಯಿಂದ ಜೀವನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಊರಿನಲ್ಲಿ ಪಂಚಾಯಿತಿ ಚುನಾವಣೆ ಆದರೆ ಮತ್ತು ಎಂ.ಎಲ್.ಎ ಚುನಾವಣೆ ಆದರೆ ಊರಿನಲ್ಲಿ ನಿಂತು ಮತಗಳನ್ನು ಹಾಕಿಸುತ್ತಿದ್ದರು ಎಂದರೆ ಸರಿ. ನನ್ನ ಗಂಡ ಕವಲಂದೆ ಪೊಲೀಸ್ ಠಾಣೆಗೆ

ಹೋಗಿ ರಾಜೀ ಮಾಡಿಸುತ್ತಿದ್ದರು ಮತ್ತು ದೂರುಗಳನ್ನು ಕೊಡಿಸುತ್ತಿದ್ದರು ಎಂದರೆ ಸರಿ. 2 ನೇ ಆರೋಪಿತನನ್ನು ಹೊರತುಪಡಿಸಿ ಉಳಿದ ಅಣ್ಣಂದಿರು ನನ್ನ ಗಂಡನೊಂದಿಗೆ ಚೆನ್ನಾಗಿ ಇದ್ದರು. ನನ್ನ ಗಂಡ ಪೊಲೀಸ್ ಠಾಣೆಗೆ ಹೋಗಿ ಬಂದು ಮಾಡುತ್ತಿದ್ದರಿಂದ ಜನಗಳು ಕೊಟ್ಟಂತಹ ದುಡ್ಡನ್ನು ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ನನಗೆ ನಮ್ಮ ಊರಿನ ಗುರುಸಿದ್ದಪ್ಪ, ಮಹದೇವಸ್ವಾಮಿ, ಸ್ವಾಮಿ ಮತ್ತು ನಾಗ ಗೊತ್ತಿರುತ್ತಾರೆ. ನನ್ನ ಗಂಡ ಅವರೊಂದಿಗೆ ಜಗಳ ಮಾಡಿಕೊಂಡು ಪೊಲೀಸ್ ಠಾಣೆಗೆ ಹೋಗಿದ್ದರು ಎಂದರೆ ಸರಿಯಲ್ಲ. ಮರಳ್ಳಿಪುರದಲ್ಲಿ ನನ್ನ ಗಂಡನನ್ನು ಕಂಡರೆ ಸ್ವಲ್ಪ ಜನ ಹೆದರುತ್ತಿದ್ದರು ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನನ್ನ ಗಂಡನಿಗೆ ಮರಳ್ಳಿಪುರ, ಪಿ. ಮರಳ್ಳಿಪುರ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಆಗದವರು ಇದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಆಗ್ಗಗ್ಗೆ ಚುಂಚನಹಳ್ಳಿ , ದೊಡ್ಡಕವಲಂದೆ, ಬೆಂಡರವಾಡಿ, ದಾಸನೂರು, ದೊಡ್ಡಹೊಮ್ಮಕ್ಕೆ ಹೋಗಿ ಬಂದು ಮಾಡುತ್ತಿದ್ದರು. ಆ ಗ್ರಾಮದ ಜನರು ಸಹ ನನ್ನ ಗಂಡನನ್ನು ಹುಡುಕಿಕೊಂಡು ಮರಳ್ಳಿಪುರಕ್ಕೆ ಬರುತ್ತಿದ್ದರು ಎಂದರೆ ಸರಿ.

ನನ್ನ ಗಂಡ ಬಿದ್ದಿದ್ದ ಅಂತ ಹೇಳಿದ್ದ ಪೂರ್ವದಲ್ಲಿ ಒಂದು ವಾರದ ಮುಂಚೆ ನನ್ನ ಗಂಡ ಟ್ರಾಕ್ಟರ್ ನಲ್ಲಿ ಜಮೀನಿನನ್ನು ಉಳುಮೆ ಮಾಡಿಸಿದ್ದರು. ಆ ಟ್ರಾಕ್ಟರ್ ನಮ್ಮದು ಇರಲಿಲ್ಲ ಬೇರೆಯವರದು ಎಂದರೆ ಸರಿ. ಟ್ರಾಕ್ಟರ್ ಉಳುಮೆ ಮಾಡಿಸಿದ್ದ ದಿವಸ ನಾನು ಟ್ರಾಕ್ಟರ್ ಡ್ರೈವರ್ ಗೆ ಊಟ ತೆಗೆದುಕೊಂಡು ಹೋಗಿದ್ದೆ. ಟ್ರಾಕ್ಟರ್ ಉಳುಮೆ ಮಧ್ಯಾಹ್ನ 1.00 ಗಂಟೆಗೆ ಶುರುವಾಗಿ ಸಂಜೆ 6.30 ವರೆಗೆ ಆಗಿತ್ತು. ಟ್ರಾಕ್ಟರ್ ನ ಡ್ರೈವರ್ ಗೆ ಊಟ ತೆಗೆದುಕೊಂಡು ಹೋಗಿದ್ದನ್ನು ಹೊರತುಪಡಿಸಿದರೆ ನಾನು ಮತ್ತು ನನ್ನ

ಗಂಡ ಆ ಜಮೀನಿನ ಹತ್ತಿರ ಹೋಗುತ್ತಿದ್ದೆವು. ಜಮೀನಿನಲ್ಲಿ ನನಗಾಗಲೀ ನನ್ನ ಗಂಡನಿಗಾಗಲೀ ಮಾಡುವಂತಹ ಕೆಲಸ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ 10–15 ತೆಂಗಿನ ಮರ ಇರುತ್ತವೆ. ಆ ತೆಂಗಿನ ಮರಗಳು ಮಳೆಯ ಆಶ್ರಯದಲ್ಲಿ ಇರುತ್ತವೆ ಎಂದರೆ ಸರಿ. ಟ್ರಾಕ್ಟರ್ ನಲ್ಲಿ ಉಳುಮೆ ಮಾಡುವ ಸಂದರ್ಭದಲ್ಲಿ ಆರೋಪಿತರು ಬಂದು ಉಳುಮೆ ಮಾಡಬೇಡಿ ಎಂದು ಹೇಳಿರಲಿಲ್ಲ. ಟ್ರಾಕ್ಟರ್ ನ ಉಳುಮೆ ಆದ ಮೇಲೆ ನನ್ನ ಗಂಡ ಜಮೀನಿನ ಹತ್ತಿರ ಬಿದ್ದಿದ್ದ ಎಂದು ಹೇಳುವ ಪೂರ್ವದಲ್ಲಿ ನನ್ನ ಗಂಡ ಮತ್ತು 1 ನೇ ಆರೋಪಿ ಜಗಳ ಮಾಡಿಕೊಂಡಿರಲಿಲ್ಲ ಎಂದರೆ ಸರಿ. ನನ್ನ ಗಂಡ ಜಮೀನಿನಲ್ಲಿ ಟ್ರಾಕ್ಟರ್ ನಿಂದ ಉಳುಮೆ ಮಾಡಿಸಿದ್ದರಿಂದ ತೊಂದರೆ ಆಗಿರುತ್ತದೆ ಎಂದು ಹೇಳಿ ಆರೋಪಿತರು ಗ್ರಾಮದಲ್ಲಿ ಯಾವುದೇ ಪಂಚಾಯಿತಿ ಮಾಡಿಸಿರಲಿಲ್ಲ ಎಂದರೆ ಸರಿ. ಚನ್ನಾಕ್ಷಿ ಮರಗಳನ್ನು ಉಳುಮೆ ಆದ ಮೇಲೆ ತರದಿದ್ದರು ಎಂದರೆ ಸರಿ. ಆ ಚನ್ನಾಕ್ಷಿ ಮರಗಳನ್ನು ಯಾರು ತರದಿದ್ದರು ಎಂದು ನನಗೆ ಗೊತ್ತಿಲ್ಲ. ನನಗೆ ಚನ್ನಾಕ್ಷಿ ಮರಗಳನ್ನು ತರದಿದ್ದವರ ಹೆಸರು ಗೊತ್ತಿರುವುದಿಲ್ಲ. ಚನ್ನಾಕ್ಷಿ ಮರಗಳನ್ನು ತರದಿದ್ದ ವಿಚಾರವಾಗಿ ವ್ಯವಹಾರವನ್ನು ನನ್ನ ಗಂಡ ಮಾಡಿದ್ದರು ಎಂದರೆ ಸರಿ. ನಾನು ಆ ವ್ಯವಹಾರದಲ್ಲಿ ಭಾಗಿ ಆಗಿರಲಿಲ್ಲ ಎಂದರೆ ಸರಿ.

ಮನೆ ತರೆಯುವ ದಿವಸ ನಾನು ಅಲ್ಲಿಗೆ ಹೋಗಿರಲಿಲ್ಲ ಎಂದರೆ ಸರಿ. ಆರೋಪಿತರು ಚನ್ನಾಕ್ಷಿ ಮರಗಳನ್ನು ತರಯಬೇಡಿ ಎಂದು ಹೇಳಿ ತಕರಾರು ಮಾಡಿರಲಿಲ್ಲ ಎಂದರೆ ಸರಿ. ಸಾಯಂಕಾಲ ಗಲಾಟೆಯಾಗಿತ್ತು ಎಂದು ಹೇಳುವ ಪೂರ್ವದಲ್ಲಿ ನಾನು ನನ್ನ ಮಗಳ ಸಂಬಂಧಿಕರ ಮದುವೆಗೆ ಸುತ್ತೂರಿಗೆ ಹೋಗಿದ್ದೆ ನನ್ನ ಗಂಡ ದೇವನೂರಿಗೆ ಮದುವೆಗೆ ಹೋಗಿದ್ದರು. ನಾನು ಸುತ್ತೂರಿನಲ್ಲಿ ಆದ ಮದುವೆಗೆ

ಹೋಗಲು ನಮ್ಮ ಊರಿನಿಂದ ಬೆಳಗ್ಗೆ 7.30 ಟ್ರೈನ್ ನಲ್ಲಿ ಸುತ್ತೂರಿಗೆ ಹೋಗಿದ್ದೆ. ಆ ರೀತಿ ನಾನು ಮತ್ತು ನನ್ನ ಗಂಡ ಮದುವೆಗಳಿಗೆ ಹೋದಾಗ ನಾನು ಸುತ್ತೂರಿನಿಂದ ದೇವನೂರಿಗೆ ಹೋಗಿರಲಿಲ್ಲ ಮತ್ತು ನನ್ನ ಗಂಡ ದೇವನೂರಿನಿಂದ ಸುತ್ತೂರಿಗೆ ಬಂದಿರಲಿಲ್ಲ. ದೇವನೂರಿನಿಂದ ನನ್ನ ಗಂಡ ಚುಂಚನಹಳ್ಳಿಗೆ ಹೋಗಿದ್ದರು. ನಾನು ಮತ್ತು ನನ್ನ ಗಂಡ ವಾಪಸ್ಸು ಮರಳ್ಳಿಪುರಕ್ಕೆ ಬರುವಾಗ ಒಬ್ಬರಿಗೊಬ್ಬರು ಭೇಟಿ ಯಾಗಿರಲಿಲ್ಲ ಎಂದರೆ ಸರಿ. ನಾನು ಸುತ್ತೂರಿನಿಂದ ಊರಿಗೆ ವಾಪಸ್ಸು ಬಸ್ಸಿನಲ್ಲಿ ಬಂದಿದ್ದೆ ನನ್ನ ಗಂಡ ಚುಂಚನಹಳ್ಳಿಯಿಂದ ಗಾಡಿಯಲ್ಲಿ ವಾಪಸ್ಸು ಊರಿಗೆ ಬಂದಿದ್ದರು. ನಾನು ಸುತ್ತೂರಿನಿಂದ ಊರಿಗೆ ಬಂದಾಗ ಸಂಜೆ 5.00 ಗಂಟೆ ಯಾಗಿತ್ತು. ನಮ್ಮ ಊರಿನಲ್ಲಿಯೇ ನನ್ನ ತಂದೆಯ ಮನೆ ಇರುತ್ತದೆ ಎಂದರೆ ಸರಿ. ನಾನು ಸುತ್ತೂರಿಗೆ ಮದುವೆಗೆ ಹೋಗಿದ್ದರಿಂದ ಸುಸ್ತಾಗಿರುತ್ತದೆ ಎಂದು ಹೇಳಿ ನಾನು ನನ್ನ ತಂದೆಯ ಮನೆಗೆ ಹೋಗಿ ಮಲಗಿಕೊಂಡಿದ್ದೆ ಎಂದರೆ ಸರಿಯಲ್ಲ. ನನ್ನ ಕಡೆ ಫೋನ್ ಇರಲಿಲ್ಲ ನನ್ನ ಗಂಡನ ಕಡೆ ಫೋನ್ ಇತ್ತು ಎಂದರೆ ಸರಿ. ನಾನು ಸುತ್ತೂರಿನಿಂದ ಊರಿಗೆ ಬರುವಾಗ ನನ್ನ ಗಂಡ ಊರಿಗೆ ಎಷ್ಟು ಗಂಟೆಗೆ ಬರುತ್ತಾರೆ ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಗುಡಿಹೊಲದಲ್ಲಿ ಬೆಳಗ್ಗಿನಿಂದ ಸಾಯಂಕಾಲದವರೆಗೆ ಯಾವುದೇ ಆಳುಕಾಳುಗಳು ಇರಲಿಲ್ಲ ಎಂದರೆ ಸರಿ. ಆ ದಿನ ಗುಡಿ ಹೊಲದಲ್ಲಿ ಕೆಲಸ ಇರಲಿಲ್ಲ ಎಂದರೆ ಸರಿ ಆದರೆ ಹೋಗಿದ್ದೆವು. ನನ್ನ ಗಂಡನಿಗೂ ಸಹ ಆ ದಿನ ಯಾವುದೇ ಕೆಲಸ ಇರಲಿಲ್ಲ ಎಂದರೆ ಸರಿ ಆದರೆ ಗಾಡಿ ತೆಗೆದುಕೊಂಡು ನಾನು ಮತ್ತು ನನ್ನ ಗಂಡ ಹೋಗಿದ್ದೆವು. ಚನ್ನಾಕ್ಷಿ ಮರಗಳನ್ನು ತರದಿದ್ದರು ಎಂದು ಹೇಳುವ ಸ್ಥಳದಲ್ಲಿ ನಮ್ಮ ಜಮೀನಿನಲ್ಲಿ ಯಾವುದೇ ತರದಿದ್ದ ಮರಗಳು ಕಳ್ಳತನ ಆಗಿರಲಿಲ್ಲ ಎಂದರೆ ಸರಿ. ನನ್ನ ಗಂಡ ಅನೇಕ ಬಾರಿ ಒಬ್ಬರೇ ಜಮೀನಿನ ಕಡೆ ಹೋಗುತ್ತಿದ್ದರು

ಎಂದರೆ ಸರಿ ಮತ್ತು ಬೇರೆ ಸ್ಥಳಗಳಿಗೂ ಒಬ್ಬರೇ ಹೋಗುತ್ತಿದ್ದರು ಎಂದರೆ ಸರಿ. ಮದುವೆಗೆ ಹೋಗುವ ಪೂರ್ವದಲ್ಲಿ ನಾನಾಗಲೀ ನನ್ನ ಗಂಡನಾಗಲೀ ಆರೋಪಿತರನ್ನು ಭೇಟಿಯಾಗಿರಲಿಲ್ಲ. ನಾನು ಮತ್ತು ನನ್ನ ಗಂಡ ಮದುವೆಗಳಿಗೆ ಹೋಗುವ ಪೂರ್ವದಲ್ಲಿ ಆರೋಪಿತರು ನಮ್ಮ ಮನೆಯ ಹತ್ತಿರ ಬಂದು ಜಗಳ ಮಾಡಿರಲಿಲ್ಲ ಎಂದರೆ ಸರಿ. ನನಗೆ ಮರಳ್ಳಿಪುರದ ಪ್ರತಾಪ ಗೊತ್ತು. ಆತನು ಜಮೀನಿನಲ್ಲಿ ಮನೆ ಕಟ್ಟಿಕೊಂಡಿರುತ್ತಾನೆ ಎಂದರೆ ಸರಿ. ಅವರ ಮನೆಗೂ ಮತ್ತು ನಮ್ಮ ಜಮೀನಿಗೂ ಸುಮಾರು 100 ಅಡಿ ಅಂತರ ಇರುತ್ತದೆ. ಪ್ರತಾಪ ಬೈಕ್ ಇಟ್ಟುಕೊಂಡಿರುತ್ತಾನೆ ಎಂದರೆ ಸರಿ. ಆತನು ಮತ್ತು ನಾವು ಚೆನ್ನಾಗಿ ಇರುತ್ತೇವೆ ಎಂದರೆ ಸರಿ. ಪ್ರತಾಪ ನನಗೆ ಚೆನ್ನಾಗಿ ಪರಿಚಯ ಎಂದರೆ ಸರಿ. ಅನೇಕ ಸಲ ಜಮೀನಿಗೆ ಹೋಗಬೇಕಾದರೆ ನಾನು ಅವನ ಬೈಕ್ ನಲ್ಲಿ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ದೂರು ಕೊಡುವಾಗ ಆ ದೂರಿನಲ್ಲಿ ಏನು ಕೆಲಸಕ್ಕೆ ಹೋಗಿದ್ದೆ ಎಂದು ಬರೆಸಿರುವುದಿಲ್ಲ ಎಂದರೆ ಸರಿ. ದೂರಿನಲ್ಲಿ ನಾನು ಮತ್ತು ನನ್ನ ಗಂಡ ಸುತ್ತೂರಿಗೆ ಮತ್ತು ದೇವನೂರಿಗೆ ಮದುವೆಗಳಿಗೆ ಹೋದ ವಿಚಾರ ಮತ್ತು ವಾಪಸ್ಸು ಮರಳ್ಳಿಪುರಕ್ಕೆ ಬಂದ ವಿಚಾರ ಬರೆಸಿರುವುದಿಲ್ಲ ಎಂದರೆ ಸರಿ. 2 ನೇ ಆರೋಪಿತನಿಗೆ ವಯಸ್ಸಾಗಿರುವುದರಿಂದ ಜಮೀನಿನಲ್ಲಿ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ.

ನಾನು ಸುತ್ತೂರಿಗೆ ಮದುವೆಗೆ ಹೋದಮೇಲೆ ಪುನಃ ನಾನು ನನ್ನ ಗಂಡನನ್ನು ನೋಡಿರುವುದಿಲ್ಲ ನನ್ನ ಗಂಡ ಬಿದ್ದ ಮೇಲೆ ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಜಮೀನಿಗೆ ಹೋದಾಗ ನಮ್ಮ ಜಮೀನಿನ ಸುತ್ತಮುತ್ತಲಿನವರು ಸೇರಿಕೊಂಡಿದ್ದರು ಎಂದರೆ ಸರಿಯಲ್ಲ. ನನಗೆ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಏಟು ಬಿದ್ದಿತ್ತು ಎಂದು ಹೇಳುವ ಸ್ಥಳದ ಅಕ್ಕಪಕ್ಕ ಏನು

ಇರಲಿಲ್ಲ ದೂರದಲ್ಲಿ ಮರದ ತರೆದಿದ್ದು ಬಿದ್ದಿತ್ತು. ನನ್ನ ಗಂಡ ಊರಿನಿಂದ ಬಂದಾಗ ನಮ್ಮ ಜಮೀನು ಪ್ರಾರಂಭವಾದ ಸ್ಥಳದಿಂದ ಸುಮಾರು 50-60 ಅಂತರದಲ್ಲಿ ಬಿದ್ದಿದ್ದರು. ನಾನು ಮನೆಯಲ್ಲಿ ಟೀ ಕುಡಿಯುತ್ತಿರುವಾಗ ಊರಿನಲ್ಲಿ ನನ್ನ ಗಂಡನಿಗೆ ಯಾರೋ ಹೊಡೆದಿರುತ್ತಾರೆ ಎಂದು ನನಗೆ ವರ್ತಮಾನ ಬಂದಿತ್ತು ಎಂದರೆ ಸರಿಯಲ್ಲ. ಆ ರೀತಿ ನನಗೆ ಗೊತ್ತಾದ ಮೇಲೆ ನಾನು ಮನೆಯಿಂದ ಜಮೀನಿಗೆ ನಡೆದುಕೊಂಡು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಆಗ ಪ್ರತಾಪ ಬಂದಿದ್ದ ನಾನು ಆ ಬೈಕ್ ಅನ್ನು ನಿಲ್ಲಿಸಿ ಅದೇ ಬೈಕ್ ನಲ್ಲಿ ಪ್ರತಾಪನ ಜೊತೆಯಲ್ಲಿ ಜಮೀನಿನ ಹತ್ತಿರ ಹೋಗಿದ್ದೆ ಎಂದರೆ ಸರಿಯಲ್ಲ. ಪ್ರತಾಪ ನನ್ನನ್ನು ಜಮೀನಿನ ಹತ್ತಿರ ಬಿಟ್ಟು ಹೋಗಿದ್ದ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಗಂಡನಿಗೆ ಮಚ್ಚಿನಿಂದ ಹೊಡೆದಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನ ಜುಟ್ಟನ್ನು ಹಿಡಿದುಕೊಂಡು ಎಳೆದಾಡಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಮತ್ತು ಅಳಿಯ ಬೇರೆ ಬೇರೆ ಊರಿನಲ್ಲಿ ವಾಸಇರುತ್ತಾರೆ ಎಂದರೆ ಸರಿ. ನನ್ನ ತಮ್ಮ ಮತ್ತು ಅಳಿಯ ನನ್ನ ಗಂಡ ಬಿದ್ದು ಹೋದ ಸುಮಾರು ಹೊತ್ತಿಗೆ ಅಲ್ಲಿಗೆ ಬಂದಿದ್ದರು ಎಂದರೆ ಸರಿ. ಅದಕ್ಕಿಂತ ಪೂರ್ವದಲ್ಲಿ ಅಕ್ಕಪಕ್ಕದ ಸುಮಾರು ಜನ ಸೇರಿಕೊಂಡಿದ್ದರು ಎಂದರೆ ಸರಿ. ನನ್ನ ಗಂಡ ಕೆಳಗೆ ಬಿದ್ದ ಮೇಲೆ ಮತ್ತೆ ಏಳಲಿಲ್ಲ ಎಂದರೆ ಸರಿ. ಏಟು ಬೀಳುವ ಪೂರ್ವದಲ್ಲಿ ನನ್ನ ಗಂಡ ತಪ್ಪಿಸಿಕೊಳ್ಳಲು ಪ್ರಯತ್ನಪಡಲಿಲ್ಲ ಏಕೆಂದರೆ 2 ನೇ ಆರೋಪಿ ನನ್ನ ಗಂಡನ ಕಣ್ಣಿಗೆ ಮಣ್ಣನ್ನು ಎರಚಿದ್ದ. ಅಕ್ಕಪಕ್ಕದವರು ಬಂದ ಮೇಲೆ ನನ್ನ ಗಂಡನಿಗೆ ಶ್ರುಶ್ರುಷೆ ಮಾಡಿರಲಿಲ್ಲ. ನನ್ನ ಗಂಡ ಬಿದ್ದಂತಹ ಸ್ಥಳದಲ್ಲಿ ಮಚ್ಚು ಕೂಡ ಇತ್ತು ಎಂದರೆ ಸರಿ . ನಾನು ಪುನಃ ಹೇಳುವುದೇನೆಂದರೆ ನನ್ನ ಗಂಡ ಬಿದ್ದಂತಹ ಸ್ಥಳದಲ್ಲಿ ಮಚ್ಚು ಬಿದ್ದಿರಲಿಲ್ಲ ಅದನ್ನು 1 ನೇ ಆರೋಪಿ

ತೆಗೆದುಕೊಂಡು ಹೋಗಿದ್ದ. ನನ್ನ ಅಳಿಯ ಮತ್ತು ತಮ್ಮ ಬರುವಾಗ ಓಮಿನಿ ಕಾರಿನಲ್ಲಿ ಬಂದಿದ್ದರು ಎಂದರೆ ಸರಿ. ನನ್ನ ಗಂಡನನ್ನು ಓಮಿನಿಗೆ ಎತ್ತಿಹಾಕಿಕೊಳ್ಳುವ ಪೂರ್ವದಲ್ಲಿ ರಕ್ತ ಹರಿಯುವುದನ್ನು ತಡೆಯಲು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ ಏಕೆಂದರೆ ತಡೆಯಲು ಆಗುತ್ತಿರಲಿಲ್ಲ.

ಕವಲಂದೆ, ನಂಜನಗೂಡು, ಪಂಡ್ಯದ ಹುಂಡಿ ಯಲ್ಲಿ ಆಸ್ಪತ್ರೆ ಇರುತ್ತದೆ ಎಂದರೆ ಸರಿ. ಮೈಸೂರಿನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹೋಗಿರಲಿಲ್ಲ ಮಿಷನ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದೆವು. ನಾವು ಕವಲಂದೆ ಪೊಲೀಸ್ ಠಾಣೆಯ ಹತ್ತಿರ ಓಮಿನಿಯನ್ನು ನಿಲ್ಲಿಸಲಿಲ್ಲ ಏಕೆಂದರೆ ನನ್ನ ಗಂಡನನ್ನು ಬದುಕಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಓಮಿನಿಯಲ್ಲಿ ನಾನು, ನನ್ನ ಅಳಿಯ, ಭಾವನ ಮಗ ಮತ್ತು ನನ್ನ ಗಂಡ ಇದ್ದೆವು. ಓಮಿನಿಯನ್ನು ಹಿಂಬಾಲಿಸಿಕೊಂಡು ಜನರು ಬೈಕಿನಲ್ಲಿ ಆಸ್ಪತ್ರೆವರೆಗೂ ಬಂದಿದ್ದರು.

**( ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**

**<u>ಸಾಕ್ಷಿಯನ್ನು ದಿನಾಂಕ *31.07.2025* ರಂದು ಮಧ್ಯಾಹ್ನ *3.00* ಗಂಟೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಾನು ನ್ಯಾಯಾಲಯಕ್ಕೆ ಬರುವ ಪೂರ್ವದಲ್ಲಿ ಪೊಲೀಸ್ ಠಾಣೆಯಲ್ಲಿ ಮಚ್ಚನ್ನು ನೋಡಿರಲಿಲ್ಲ ಹೊಲದಲ್ಲಿ ನೋಡಿದ್ದೆ. ಪೊಲೀಸರು ಮಚ್ಚಿನ ವಿವರಣೆ ಕೇಳಿ ನನ್ನ ಹೇಳಿಕೆ ಪಡೆದುಕೊಂಡಿರಲಿಲ್ಲ. ಮಚ್ಚು ಸಿಕ್ಕಾಗ ನಾನು ಇರಲಿಲ್ಲ. 1 ನೇ ಆರೋಪಿ ಎಂ.ಒ-1 ರಿಂದ ಹೊಡೆದಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಪಂಚೆಯನ್ನು ಹಾಕಿಕೊಳ್ಳುತ್ತಿದ್ದರು. ಪಂಚೆಯನ್ನು ನಾನು ಪೊಲೀಸರಿಗೆ ಕೊಟ್ಟಿದ್ದೆ. ಮೊಲೀಸರು ನನ್ನ ಗಂಡನ ಪಂಚೆಯನ್ನು ಆಸ್ಪತ್ರೆಯಿಂದ ತೆಗೆದುಕೊಂಡು ಹೋಗಿದ್ದರು. Post mortem ಮಾಡುವ ಕಾಲಕ್ಕೆ ಪೊಲೀಸರು ಪಂಚೆಯನ್ನು ತೆಗೆದುಕೊಂಡು ಹೋಗಿದ್ದರು. ಮಿಷನ್ ಆಸ್ಪತ್ರೆಯಲ್ಲಿ 1.10 ಗಂಟೆಗೆ ನನ್ನ ಗಂಡನ ಪ್ರಾಣ ಹೋಗಿತ್ತು ನನ್ನ ಮೊಮ್ಮಕ್ಕಳು , ನನ್ನ ಅಳಿಯಂದಿರು ನನ್ನ ಗಂಡನ post morterm ಮಾಡಿಸಲು ಹೋಗಿದ್ದರು. post morterm ಮಾಡುವ ಸ್ಥಳಕ್ಕೆ ನಾನು ಹೋಗಿರಲಿಲ್ಲ. ಮಾರನೇ ದಿವಸ 8.00 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದೆವು. ನನ್ನ ಭಾವನ ಮಗ ಮಹದೇವಸ್ವಾಮಿ ಮತ್ತು ನಾನು ಕೂಡಿ ಪೊಲೀಸ್ ಠಾಣೆಗೆ ದೂರನ್ನು ಕೊಟ್ಟಿದ್ದೆವು. ನಾನು ಮಹದೇವಸ್ವಾಮಿ ಮುಖಾಂತರ ದೂರನ್ನು ಬರೆಸಿ ಕೊಟ್ಟಿದ್ದೆ. ಪೊಲೀಸ್ ಠಾಣೆಯ ಹೊರಗಡೆ ದೂರನ್ನು ಬರೆಸಿ ಪೊಲೀಸರಿಗೆ ಕೊಟ್ಟಿದ್ದೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಭಾವಂದಿರು ಕವಲಂದೆ ಪೊಲೀಸ್ ಠಾಣೆಗೆ ಬಂದಿದ್ದರು. ಮಹದೇವಸ್ವಾಮಿ ವಿಷನ್ ಆಸ್ಪತ್ರೆಯಿಂದ ನನ್ನನ್ನು ಕರೆದುಕೊಂಡು ಹೋಗಿದ್ದ. ನನ್ನ ಗಂಡನ ಪ್ರಾಣ ಹೋದ ಮೇಲೆ ಇಬ್ಬರು ಪೊಲೀಸರು ಮಿಷನ್ ಆಸ್ಪತ್ರೆಗೆ ಬಂದು ನೋಡಿ ಕೊಂಡು ಹೋಗಿದ್ದರು. ಪೊಲೀಸರಿಬ್ಬರು ಆಸ್ಪತ್ರೆಗೆ ಬಂದಾಗ ನಾನು ದೂರನ್ನು ಕೊಟ್ಟಿರಲಿಲ್ಲ. ನಮ್ಮ ಜೊತೆಯಲ್ಲಿ ಇದ್ದವರು ಯಾರೋ ಪೊಲೀಸರಿಗೆ ಫೋನ್ ಮಾಡಿರಬಹುದು ಆದ್ದರಿಂದ ಇಬ್ಬರು ಪೊಲೀಸರು ಮಿಷನ್ ಆಸ್ಪತ್ರೆಗೆ ಬಂದಿದ್ದರು. ದೂರಿನಲ್ಲಿ ಬರೆದಿರುವ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಾನು ವಿಷಯವನ್ನು ಹೇಳಿದ ಮೇಲೆ ಮಹದೇವಸ್ವಾಮಿ ದೂರನ್ನು ಓದಿ ನನಗೆ ಹೇಳಿದ್ದ ಆ ನಂತರ ನಾನು ದೂರನ್ನು ಕೊಟ್ಟಿದ್ದೆ. ಆರೋಪಿತರು ಆರ್ಥಿಕವಾಗಿ ಚೆನ್ನಾಗಿ ಇರುವುದರಿಂದ ಅವರನ್ನು ಜೈಲಿಗೆ ಕಳುಹಿಸಿದರೆ ಅವರ ಆಸ್ತಿಯನ್ನು ಹೊಡೆದುಕೊಳ್ಳಬಹುದು ಎಂದು ಹೇಳಿ ನನ್ನ ಭಾವಂದಿರೊಂದಿಗೆ ಸೇರಿ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಮಿಷನ್ ಆಸ್ಪತ್ರೆಗೆ ಬಂದ ಮೇಲೆ ನಾವುಗಳು ಯಾರು ದೂರನ್ನು ಕೊಡಲು ಪ್ರಯತ್ನ ಪಡಲಿಲ್ಲ. ನನ್ನ ಗಂಡನ ಸಾವಿಗೆ ಆರೋಪಿತರು

ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ಬೇರೆಯಾರೋ ನನ್ನ ಗಂಡನನ್ನು ಹೊಡೆದು ಹಾಕಿದ್ದಾರೆ ಎಂದರೆ ಸರಿಯಲ್ಲ. ನಾನು ಘಟನೆಯಾಗುವಾಗ ಇರಲಿಲ್ಲ ಮತ್ತು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಣ್ಣುಮಕ್ಕಳು , ಅಳಿಯಂದಿರು ಮತ್ತು ಮಹದೇವಸ್ವಾಮಿ ಸೇರಿಕೊಂಡು ನನ್ನನ್ನು ಘಟನೆಯನ್ನು ನೋಡಿದ ಸಾಕ್ಷಿಯಂತ ಹೇಳಿ ಸೃಷ್ಟಿಮಾಡಿ ಸುಳ್ಳು ದೂರು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**